**ಸಾಕ್ಷಿಯನ್ನು ದಿಃ09.08.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಎಸ್ ಜೆ ಎಲ್ ವಕೀಲರಿಂದಃ**

ನಾನು ಹುಚ್ಚಯ್ಯ ಮಗ ಮತ್ತು 1 ನೇ ವಾದಿ ಹುಚ್ಚಯ್ಯ ರವರ ಮಗ ಎಂದರೆ ಸರಿ. ನಮ್ಮ ತಾತನ ಹೆಸರು ಕರಿ ನಾಯಕ ಉರುಫ್ ಚಿಕ್ಕ ಕರಿನಾಯಕ ಎಂದರೆ ಸರಿ. ಚಿಕ್ಕ ಕರಿನಾಯಕನ ಮೊದಲನೇ ಹೆಂಡತಿ ಮರಕಮ್ಮ ಎಂದರೆ ಸರಿ. ಚಿಕ್ಕ ಕರಿನಾಯಕ ಹಾಗೂ ಮರಕಮ್ಮಳಿಗೆ ನಿಂಗಮ್ಮ, ಮಹದೇವನಾಯಕ, ಹುಚ್ಚಯ್ಯ ಅಲಿಯಾಸ್ ಹುಚ್ಚನಾಯಕರವರ ಮಕ್ಕಳು ಎಂದರೆ ಸರಿ. ಅವರ ಪೈಕಿ ಹುಚ್ಚಯ್ಯ ಮತ್ತು ನಿಂಗಮ್ಮ ತೀರಿಕೊಂಡಿದ್ದಾರೆ. ಮಹದೇವನಾಯಕ ಬದುಕಿದ್ದಾರೆ. ಮಹದೇವನಾಯಕನಿಗೆ ಹೆಂಡತಿ, ಮಕ್ಕಳು ಇದ್ದಾರೆ. ಚಿಕ್ಕ ಕರಿನಾಯಕನ 2 ನೇ ಹೆಂಡತಿ ಸಣ್ಣಮ್ಮ ಎಂದರೆ ಸರಿ. ಸದರಿ ಸಣ್ಣಮ್ಮಳಿಗೆ ಮಹದೇವನಾಯಕ, ಸ್ವಾಮಿನಾಯಕ ಹಾಗೂ ಹುಚ್ಚ ನಾಯಕ ಎಂದು 3 ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ ಸ್ವಾಮಿ ನಾಯಕ ತೀರಿಕೊಂಡಿರುತ್ತಾರೆ. ಸರ್ವೆ ನಂ. 112/2 ರಲ್ಲಿ ನಮ್ಮ ತಾತ ಚಿಕ್ಕ ಕರಿನಾಯಕನಿಗೆ 2 ಎಕರೆ 18 ವರೆ ಗುಂಟೆ ಜಮೀನು ಇತ್ತು ಎಂದರೆ ಸರಿ. ಅದೇ ರೀತಿ ಸರ್ವೆ ನಂ. 361/2 ರಲ್ಲಿ ನಮ್ಮ ತಾತ ಚಿಕ್ಕ ಕರಿನಾಯಕನಿಗೆ 12 ಗುಂಟೆ ಜಮೀನು ಇತ್ತು. ದಿಃ 18.06.1981 ರಲ್ಲಿ ಚಿಕ್ಕಕರಿನಾಯಕರ 1 ನೇ ಹೆಂಡತಿ ಮಕ್ಕಳು ಮತ್ತು 2 ನೇ ಹೆಂಡತಿಯ ಮಕ್ಕಳ ಎದುರುಗಡೆ ಪಂಚಾಯಿತಿ ಪಾಲು ಪಟ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಾಯಿ ಸಾಕಮ್ಮ ಮಹದೇವಮ್ಮಳ ವಿರುದ್ಧ ಓ ಎಸ್ ನಂ. 325/2007 ಅನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯು ದಿಃ 02.11.2011 ರಲ್ಲಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಮ್ಮ ತಾಯಿ ಚಿಕ್ಕ ಕರಿನಾಯಕರ ಮೊದಲನೇ ಹೆಂಡತಿ ಮತ್ತು 2 ನೇ ಹೆಂಡತಿಯ ಮಕ್ಕಳ ಮಧ್ಯೆ ವಿಭಾಗ ಆಗಿರುತ್ತದೆ ಎಂದು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 5 ಮತ್ತು 7 ನೇ ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ

ತಿಳಿದುಕೊಂಡಿದ್ದೇನೆ. ದಿಃ 20.06.1991 ರಲ್ಲಿ ನನ್ನ ತಾತ ಚಿಕ್ಕ ಕರಿನಾಯಕ , ಮಹದೇವನಾಯಕ ಮತ್ತು ಹುಚ್ಚ ನಾಯಕ ಎನ್ನುವವರು ಸಣ್ಣಮ್ಮ ಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 361/2 ರಲ್ಲಿ ಒಟ್ಟು 12 ಗುಂಟೆ ಇದ್ದು, 6 ಗುಂಟೆ ಜಮೀನು ಮರಕಮ್ಮಳಿಗೆ ಮತ್ತು ಇನ್ನುಳಿದ 6 ಗುಂಟೆ ಜಮೀನು ಸಣ್ಣಮ್ಮಳಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಮರಕಮ್ಮಳ ಬಂದಂತಹ 6 ಗುಂಟೆ ಜಮೀನನ್ನು ಸಣ್ಣಮ್ಮಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಮಯವಾಗಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿಂ.ವಿ.), ಮೈಸೂರು